

# ಕಾಯಿ ಒಡೆಯುವ ಸೈನಿಕರು!

**'ನಟ್ ಕ್ರ್ಯಾಕರ್ ಮ್ಯೂಸಿಯಂ' ಲೀವೆನ್‌ವರ್ತ್ ಎಂಬ ಪುಟ್ಟ ನಗರದ ಪ್ರಮುಖ ಆಕರ್ಷಣೆ. ಇಲ್ಲಿರುವ ಸಾವಿರಾರು ಅಡಿಕೆ ಕತ್ತರಿ ಗೊಂಬೆಗಳು ಒಂದಕ್ಕಿಂತ ಒಂದು ಸೋಜಿಗವೆನಿಸುತ್ತವೆ.**

**■ ಧಾರಿಣಿ ಮಾಯಾ**

ಅಮೆರಿಕದ ಸಿಯಾಟಲ್‌ಗೆ ಪ್ರವಾಸಕ್ಕೆ ಹೋದಾಗ, ಅಲ್ಲಿಂದ ಎರಡೂವರೆ ಗಂಟೆ ಪ್ರಯಾಣಿಸಿ ಸಿಗಬಹುದಾದ 'ಲೀವೆನ್‌ವರ್ತ್' ಎಂಬ ನಗರವನ್ನು ನೋಡಲೇಬೇಕೆಂದು ನನ್ನ ಮಗ ಕರೆದೊಯ್ದ. ಅಮೆರಿಕದ ವಾಷಿಂಗ್ಟನ್ ಸ್ಟೇಟ್‌ನ ಚೇಲನ್ ಕೌಂಟಿಯಲ್ಲಿರುವ ನಗರವೇ ಲೀವೆನ್‌ವರ್ತ್. 1.47 ಚ.ಮೀ. ಇರುವ ಈ ಪುಟ್ಟ ನಗರಕ್ಕೆ ಕಾಲಿಟ್ಟೊಡನೆ ಒಂದು ಬದಿಯಲ್ಲಿ ಬೃಹದಾಕಾರದ ಬೆಟ್ಟ, ಅದರ ಮಗ್ಗುಲಲ್ಲೇ ಸಾಲುಸಾಲಾಗಿ ಅಂಟಿಕೊಂಡ ಅಂಗಡಿ ಮಳಿಗೆಗಳು, ರೆಸ್ಟೋರೆಂಟ್‌ಗಳು, ಕಲಾಕಾರರು ತಮ್ಮ ಕಲಾಕೃತಿಗಳನ್ನು ಮಾರಲು ಹಾಕಿಕೊಂಡ ಟೆಂಟ್‌ಗಳು ಎಲ್ಲವೂ ನೋಡಲು ಅತ್ಯಾಕರ್ಷಕವಾಗಿದ್ದು, ಒಂದು ಆಟಿಕೆಯ ನಗರದಂತೆ ಗೋಚರಿಸುತ್ತದೆ. ವೈನ್ ಟೇಸ್ಟಿಂಗ್, ಬಿಯರ್‌ಪ್ರಿಯರಿಗೆ ಇದು ಹೇಳಿ ಮಾಡಿಸಿದ ಜಾಗ.

ಈ ಪುಟ್ಟ ನಗರವನ್ನು ಜರ್ಮನಿಯ ಬವಾರಿಯನ್ ಹಳ್ಳಿಯ ಶೈಲಿಯಲ್ಲಿ ನಿರ್ಮಿಸಲಾಗಿದೆ. ಪ್ರವಾಸಿಗರು ಮಜಬೂತಾದ ಕುದುರೆ ಗಾಡಿ ಏರಿ ಇಡೀ ನಗರವನ್ನು 20ರಿಂದ 30 ನಿಮಿಷದಲ್ಲಿ ಸುತ್ತು ಹಾಕಬಹುದು. ಕುದುರೆ ಗಾಡಿ ಓಡಿಸುವವರು ಮಹಿಳೆಯರೇ ಆಗಿದ್ದು, ದಾರಿಯುದ್ದಕ್ಕೂ ಈ ನಗರದ ವಿಶೇಷವನ್ನು ಹೇಳುತ್ತಾ ಕರೆದೊಯ್ಯುತ್ತಾರೆ.

ಲೀವೆನ್‌ವರ್ತ್‌ನ ಪ್ರಮುಖ ಆಕರ್ಷಣೆ 'ನಟ್ ಕ್ರ್ಯಾಕರ್ ಮ್ಯೂಸಿಯಂ'. ಈ ಮ್ಯೂಸಿಯಂನೊಳಗೆ ಕಾಲಿಡುತ್ತಿದ್ದಂತೆ ಕಂಡದ್ದು ಉದ್ದಕ್ಕೂ ಗಾಜಿನ ಕಪಾಟುಗಳಲ್ಲಿ ಸಾಲಾಗಿ ಜೋಡಿಸಿಟ್ಟ ಗೊಂಬೆಗಳು. ಮೊದಲ ನೋಟಕ್ಕೆ ಇವು ನಮ್ಮ ದಸರಾ ಗೊಂಬೆಗಳಂತೆ ಕಂಡರೂ, ಅವುಗಳ ಮೇಲಿನ ಫಲಕಗಳನ್ನು ಓದಿ ಈ ಗೊಂಬೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅವು ಕಾಯಿ ಒಡೆಯುವ ಅಥವಾ ನಟ್ ಕ್ರ್ಯಾಕರ್ಸ್ ಗೊಂಬೆಗಳೆಂದು ತಿಳಿಯುತ್ತದೆ.

ನಟ್ ಕ್ರ್ಯಾಕರ್‌ಗಳನ್ನು 'ಅಡಿಕೆ ಕತ್ತರಿ' ಅಥವಾ 'ಕಾಯಿ ಕತ್ತರಿ' ಎಂದು ಹೇಳುತ್ತೇವೆ. ಈ ಮ್ಯೂಸಿಯಂನಲ್ಲಿ ಕಂಡುಬರುವ ನಟ್ ಕ್ರ್ಯಾಕರ್‌ಗಳಷ್ಟು ವೈವಿಧ್ಯಮಯ, ವಿಭಿನ್ನ ಶೈಲಿ ಮತ್ತು ಪ್ರಕಾರಗಳ ಬೊಂಬೆಗಳು ಪ್ರಪಂಚದಾದ್ಯಂತ ಇದುವರೆಗೂ ಎಲ್ಲೂ ಕಂಡುಬಂದಿಲ್ಲ ಎಂದು ಹೇಳಲಾಗಿದೆ. ಪುರಾತನ ಕಾಲದಿಂದ ಆಧುನಿಕ ಅಕ್ರಿಲಿಕ್‌ವರೆಗೆ ಎಲ್ಲಾ ಮಾದರಿಯ ಅಡಿಕೆ ಕತ್ತರಿಗಳನ್ನು ಇಲ್ಲಿ ಕಾಣಬಹುದು.

ಕಬ್ಬಿಣ, ಹಿತ್ತಾಳೆ, ಬೆಳ್ಳಿ ಅಥವಾ ಬಂಗಾರದ ಲೋಹಗಳನ್ನು ಕೈಯಿಂದಲೇ ಬಡಿದು ಅಥವಾ ಅಚ್ಚಿನ ಮೂಲಕವೂ ಮಾಡಲಾಗಿದೆ. ವಿವಿಧ ಪ್ರಕಾರದ ಮರಗಳಿಂದ, ಕಲ್ಲಿನಿಂದ, ಮೂಳೆ, ಕೊಂಬು ಹಾಗೂ ಪಿಂಗಾಣಿಯಿಂದ ಕೆತ್ತಲಾದ ಅಡಿಕೆ ಕತ್ತರಿಗಳು ಕಣ್ಸೆಳೆಯುತ್ತವೆ. ಆಯಾ ಕಾಲದ, ಪ್ರಾದೇಶಿಕ ಸಂಸ್ಕೃತಿ ಹಾಗೂ ಕಲಾಕಾರನ ನೈಪುಣ್ಯದಿಂದ ಸಾವಿರಾರು ಅಡಿಕೆ ಕತ್ತರಿಗಳು ಹುಟ್ಟು ಪಡೆದುಕೊಂಡಿವೆ.

ಮರದ ಮೆಟ್ಟಿಲ ಮಹಡಿ ಏರಿದರೆ ಅಲ್ಲೂ ಇದೇ ರೀತಿಯ ವೈವಿಧ್ಯಮಯ ಗೊಂಬೆಗಳನ್ನು ಕಪಾಟುಗಳಲ್ಲಿ ಸಾಲಾಗಿ ಜೋಡಿಸಲಾಗಿತ್ತು. ಮರದ ಅಡಿಕೆ ಕತ್ತರಿ ಕಪಾಟಿನ ಮೇಲೆ– Please do not take pictures of the nut crackers in this case ಎಂಬ ಸೂಚನಾಚೀಟಿ ಅಂಟಿಸಲಾಗಿತ್ತು. ಆದರೂ ವೀಕ್ಷಿಸುತ್ತಿದ್ದ ಕೆಲವರ ಕ್ಯಾಮೆರಾದಿಂದ ಕ್ಲಿಕ್ ಕ್ಲಿಕ್ ಸದ್ದಾಗುತ್ತಿತ್ತು. ಬೃಹದಾಕಾರದ ನಟ್ ಕ್ರ್ಯಾಕರ್ಸ್‌ಗಳನ್ನು ಮುಟ್ಟುವ ಹಾಗಿಲ್ಲ ಎಂಬ ಫಲಕ ಹಾಕಿದ್ದರೂ, ಮನುಷ್ಯನ ಮಂಗ ಬುದ್ಧಿ ಬಿಡುತ್ತದೆಯೇ... ಅಲ್ಲಿನವರ ಕಣ್ತಪ್ಪಿಸಿ ಕೊಂಚ ಮುಟ್ಟಿ ಸಮಾಧಾನಿಸಿಕೊಂಡದ್ದಾಯಿತು.

ನೆಲಮಹಡಿಯ ಪ್ರವೇಶದ್ವಾರದಲ್ಲಿ ಪುಟ್ಟ ಪುಟ್ಟ ಮರದ ಗೊಂಬೆಗಳ ಕೀ ಚೈನ್, ಸಾವನೀರ್‌ಗಳು ಇದ್ದವು. ಮೊದಲ ನೋಟದಲ್ಲಿ ಇವೆಲ್ಲಾ ಏನು ಎಂದು ಗೊತ್ತಾಗಿರಲಿಲ್ಲ. ಸಂಪೂರ್ಣ ಮ್ಯೂಸಿಯಂ ವೀಕ್ಷಿಸಿದ ಮೇಲೆ ಇವೆಲ್ಲಾ ನಟ್ ಕ್ರ್ಯಾಕರ್‌ಗಳ ಪುಟಾಣಿ ಪ್ರತಿರೂಪ ಎಂದು ತಿಳಿದುಬಂತು. ಇವು ನೋಡಲಷ್ಟೇ ಚಂದಿದ್ದು, ಇವುಗಳಿಂದ ಯಾವುದೇ ಕಾಯಿಗಳನ್ನು ಒಡೆಯಲು ಸಾಧ್ಯವಾಗುವುದಿಲ್ಲ.

ಈ ಮ್ಯೂಸಿಯಂನ ಒಂದು ಪ್ರತ್ಯೇಕ ಕೊಠಡಿಯ ಪುಟ್ಟ

